ಅವಿರತ ತಿರುಗುತ್ತಿದ್ದ ನಮ್ಮ ದೈನಂದಿನ ಬದುಕಿನ ಚಕ್ರ ಆ ರಾತ್ರಿ ಒಂದು ವಿರಾಮ ತೆಗೆದುಕೊಂಡು, ಹೊಸತೇನನ್ನೋ ಚಿತ್ರಿಸುತ್ತದೆ ಎನ್ನುವ ಸುಳಿವು ನನಗಾಗ ಇರಲಿಲ್ಲ.

ಒಂದು ಗಂಟೆಯ ಪ್ರಯಾಣ ಮುಗಿದು ಹೋಟೆಲ್ ತಲುಪಿದೆವು. ನಮ್ಮ ನಮ್ಮ ಕೋಣೆಗಳನ್ನು ಸೇರಿ ರಿಫ್ರೆಷ್ ಆಗಿ ಒಂದೆರಡು ಗಂಟೆಗಳ ಅನಂತರ ಮತ್ತೆ ಎಲ್ಲರೂ ಹೋಟೆಲ್ ಲಾಬಿಯಲ್ಲಿ ಸೇರಿ, ಅಲ್ಲಿಂದ ಸ್ವಲ್ಪ ದೂರದಲ್ಲಿದ್ದ ಮತ್ತೊಂದು ರೆಸ್ಟೋರೆಂಟ್‌ನಲ್ಲಿ ಸಾಂಪ್ರದಾಯಿಕ ಸ್ವೀಡಿಶ್ ಊಟಕ್ಕೆ ಕರೆದೊಯ್ಯುವುದಾಗಿ ನಮ್ಮ ಏಜೆಂಟ್ ರೀಸ್ ಹೇಳಿದ.

'ಯಾವ ಊಟವೂ ಬಿಟ್ಟಿಯಲ್ಲ' ಎಂಬ ಮಾತಿದೆ. ಗೋಥೆನ್‌ಬರ್ಗ್ ದುಬಾರಿ ನಗರವೆಂದು ಕೇಳಿದ್ದೆ. ಉನ್ನತ ತರಬೇತಿಗೆಂದು ಅಧ್ಯಯನದ ಭಾಗವಾಗಿ ಅಲ್ಲಿಗೆ ಹೋಗಿದ್ದ ನಮ್ಮನ್ನೆಲ್ಲ ಸಂತೋಷವಾಗಿಡಲು ರೀಸ್‌ನ ಸ್ವೀಡನ್ ಕಂಪನಿ ಚೆನ್ನಾಗಿ ದುಡ್ಡು ಖರ್ಚು ಮಾಡಿತ್ತು. ಮುಂದೆ ಅವರ ಉತ್ಪನ್ನಗಳಿಗೆ ಪ್ರಮುಖ ಗ್ರಾಹಕರಾಗಲಿದ್ದ ವೈದ್ಯರ ತಂಡ ನಮ್ಮದಾಗಿತ್ತು. ಹಾಗಾಗಿ, ಅವರ ಎಲ್ಲ ಉಪಚಾರಗಳಿಗೆ ಮುಂದಿನ ವರ್ಷಗಳಲ್ಲಿ ನಾವು ಬಡ್ಡಿ ಸಮೇತ ಹಣ ಕಟ್ಟುವ ಸಾಧ್ಯತೆ ದಟ್ಟವಾಗಿತ್ತು.

## *4*

ಕ್ಯಾಟ್ ಮತ್ತೆ ಸಣ್ಣಗೆ ಸುರಿದ ಹಿಮದಲ್ಲಿಯೇ ತನ್ನ ಓಟ ಮುಗಿಸಿ ಬಂದಳು. ಬೆಳಗ್ಗೆ ಐದು ಗಂಟೆಗೆ ಎದ್ದು ಓಡದಿದ್ದರೆ ಅವಳ ಶರೀರವೇ ಅಲ್ಲೋಲ ಕಲ್ಲೋಲವಾಗುತ್ತದೆಂದೂ, ಅದಕ್ಕಾಗಿ ಅಲಾರಾಂ ಇಟ್ಟುಕೊಂಡಿದ್ದೇನೆಂದೂ ಹೇಳಿ, ತನ್ನ ದೇಹದ ಎಂಡ್ಯೂರೆನ್ಸ್‌ನ ಮಟ್ಟ ಏನೆಂದು ಎಲ್ಲರಿಗೂ ಮನಮುಟ್ಟುವಂತೆ ವಿವರಿಸಿದಳು. ಎಲ್ಲರೂ ಶವರ್ ಮುಗಿಸಿ, ಚೆನ್ನಾಗಿ ಶೃಂಗರಿಸಿಕೊಂಡು ಹೊರಟೆವು. ಅಂತಹ ಚಳಿಯಲ್ಲಿಯೂ ಡಿಮಿಟ್ರಿ ಒಂದು ತೆಳ್ಳಗಿನ ಬಿಗಿ ಶರ್ಟ್ ಮತ್ತು ಜೀನ್ಸ್‌ನಲ್ಲಿ ಹೊರಟಿದ್ದ. 'ರಷ್ಯಾದ ಚಳಿಯ ಮುಂದೆ ಇದೇನು ಮಹಾ?' ಎನ್ನುವಂತೆ ಇದ್ದ ಅವನ ಉಡುಪು ಹಲವರ ಹುಬ್ಬೇರಿಸಿತ್ತು. ನನ್ನ ಮತ್ತೊಬ್ಬ ಗೆಳತಿ ಬರ್ಕಾ, ಇಂತಹ ಇಳಿ ಸಂಜೆಯ ಹಿಮದಲ್ಲೂ ಪಾಯಿಂಟೆಡ್ ಹೀಲ್ಸ್ ಧರಿಸಿದ್ದಳು. ಅವಳ ಹೀಲ್ಸ್‌ಗಳು ಕರಗುತ್ತಿದ್ದ ಹಿಮದ ಕೆಸರನ್ನು ನಿರ್ದಯವಾಗಿ ಇರಿಯುತ್ತ ಡಲ್ಲಾದ ತಪ್ ತಪ್ ಎನ್ನುವ ಶಬ್ದಗಳನ್ನು ಹೊರಡಿಸುತ್ತಿದ್ದವು.

ಹಿಮ ಸುರಿತ ನಿಂತು ಬಾನು ಕಪ್ಪಾಗುತ್ತಿತ್ತು. ಆಕಾಶದಲ್ಲಿ ಮುಗಿಲುಗಳು ದಟ್ಟವಾಗಿ ಕಟ್ಟತೊಡಗಿದಂತೆ ನನಗೆ ಕಂಡಿತು. ಮಳೆ ಬಂದರೂ ಬರಬಹುದು ಎಂದುಕೊಂಡೆ. ಬದುಕಿನ ಸವಾಲುಗಳಿಗೆ ನಾವು ಸಿದ್ಧತೆ ಮಾಡಿಕೊಳ್ಳುವುದನ್ನೇ ಕೆಲವೊಮ್ಮೆ ಮರೆತುಬಿಡುತ್ತೇವೆ ಎನ್ನುವಂತೆ ಮಳೆಯಿಂದ ರಕ್ಷಿಸಿಕೊಳ್ಳಲು ನಮ್ಮ ಬಳಿ ಕೊಡೆಗಳಿರಲಿಲ್ಲ.

ಹತ್ತಿರದಲ್ಲೇ ಇದ್ದ ರೆಸ್ಟೋರೆಂಟ್ ಅದು. ಪುಟ್ಟದಾಗಿ ಸ್ವೀಡಿಶ್ ಶೈಲಿಯಲ್ಲಿ ಅಲಂಕೃತವಾಗಿದ್ದ ಜಾಗ. ಅಲ್ಲಿ ನಮಗಾಗಿ ಸ್ವೀಡಿಶ್ ವೈನ್ ಕಾಯುತ್ತಿತ್ತು. ನಮ್ಮನ್ನು ಕೂರಿಸಿದ ಏಜೆಂಟ್ ಬಾರ್‌ನಲ್ಲಿ ಹೋಗಿ ಕುಳಿತ. ನಮ್ಮ ಊಟವಾಗುವವರೆಗೆ ಅವನು ಕಾಯಬೇಕಿತ್ತು. ತನ್ನ ಕಂಪ್ಯೂಟರನ್ನು ತೆಗೆದು ಅವನು ಆರಾಮವಾದದ್ದನ್ನು ಗಮನಿಸಿದೆ.

ಯಾರಿಗೂ ಹಸಿವಿರಲಿಲ್ಲ. ಆದರೆ, ಓದು ಮುಗಿಸಿ ತಮ್ಮ ತಮ್ಮ ಕೆಲಸ ಮತ್ತು ಜಾಗಗಳಿಗೆ ಮರಳುವ ಮುನ್ನ ಚೆನ್ನಾಗಿ ಹರಟೆ ಹೊಡೆಯಲು ಮತ್ತು ಒಬ್ಬರನ್ನೊಬ್ಬರು ಅರಿಯಲು ಅದು ಸುಸಮಯವಾಗಿತ್ತು. ಇವತ್ತು ಹೇಗೆ ಕಾಲ ಕಳೆಯುವುದು ಎಂದು ಚರ್ಚಿಸಿದೆವು. ನಮ್ಮ ತರಬೇತುದಾರ ಅಲೆಕ್ಸ್ ಯಾಕೋ ಗಂಭೀರವಾಗಿದ್ದ. ಕೊನೆಗೆ ಬಾಯ್ಬಿಟ್ಟು,

"ನಾವೆಲ್ಲ ಇಷ್ಟು ದಿನ ಜೊತೆಗಿದ್ದರೂ, ಒಬ್ಬರ ಬಗ್ಗೆ ಇನ್ನೊಬ್ಬರಿಗೆ ಏನೂ ತಿಳಿದಿಲ್ಲ. ಒಂದು